# ರಾಷ್ಟ್ರಕವಿ ಡಾ॥ ಜಿ.ಎಸ್.ಶಿವರುದ್ರಪ್ಪ–ವ್ಯಕ್ತಿಚಿತ್ರ

"ಕನ್ನಡ ಭಾಷೆಯ ಹೃದಯವನ್ನು ಬಲ್ಲ" ಕವಿ ಎಂದು ಹೆಸರಾಗಿರುವ, ಸುವರ್ಣ ಕರ್ನಾಟಕದ ಅಂಗವಾಗಿ "ರಾಷ್ಟ್ರಕವಿ" ಪ್ರಶಸ್ತಿಯನ್ನು ಪಡೆದಿರುವ, ನಮ್ಮ ನಿಮ್ಮೆಲ್ಲರ ನೆಚ್ಚಿನ ಕವಿ, ಗೌರವಾನ್ವಿತ ವ್ಯಕ್ತಿತ್ವವೇ ಜಿ.ಎಸ್.ಶಿವರುದ್ರಪ್ಪನವರು.

ಕರ್ನಾಟದ ಶಿವೊಗ್ಗ ಜಿಲ್ಲೆಯ, ಶಿಕಾರಿಪುರದಲ್ಲಿ ೧೯೨೬ ಫೆಬ್ರುವರಿ ೭ನೇ ದಿನಾಂಕ ಜನ್ಮತಳೆದ ಮಹೋದಯರು, ೧೯೪೯ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ. ಆನರ್ಸ್ ಮತ್ತು ಅದೇ ವಿಶ್ವವಿದ್ಯಾಲಯದಿಂದ ೧೯೫೩ರಲ್ಲಿ ಎಮ್.ಎ. ಪದವಿಗಳನ್ನು ಮೂರು ಸ್ವರ್ಣಪದಕಗಳೊಂದಿಗೆ ಪಡೆದ ವಿದ್ಯಾರ್ಥಿ.

೧೯೪೯ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದ ಶ್ರೀಯುತರು, ೧೯೬೩ರಿಂದ ೧೯೬೬ರವರೆಗೆ ಹೈದ್ರಾಬಾದ್ ಉಸ್ಮಾನಿಯ ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ಅಲ್ಲಿನ ಕನ್ನಡ ವಿಭಾಗದ ಮುಖ್ಯಸ್ಥ ಹಾಗೂ ರೀಡರ್ ಆಗಿ ಕಾರ್ಯನಿರ್ವಸಿದರು.

ಡಾ॥ ಜಿ.ಎಸ್.ಶಿವರುದ್ರಪ್ಪನವರು ಕನ್ನಡನಾಡಿನ ಸಾಂಸ್ಕೃತಿಕ–ಸಾಮಾಜಿಕ ಬದುಕಿನ ದರ್ಶಕ ಪ್ರಜ್ಞೆಯಾಗಿದ್ದಾರೆ. ಈ ಸಾಹಿತ್ಯಸಾಧಕರು ಕಳೆದ ಐವತ್ತು ವರ್ಷಗಳಿಂದ ನಿರಂತರವಾಗಿ ಸಾಹಿತ್ಯ ಕ್ಷೇತ್ರದ ಸೇವೆಯಲ್ಲಿ ನಿರತರಾಗಿರುವ ಕವಿ. ಕವಿಯೆಂದೇ ಖ್ಯಾತರಾದರೂ, ಸಾಹಿತ್ಯವಿಮರ್ಶೆ ಮತ್ತು ಕಾವ್ಯಮೀಮಾಂಸೆ ಕ್ಷೇತ್ರದಲ್ಲೂ ಅಸಮಾನ್ಯ ಸಾಧನೆಗೈದಿರುವ ಇವರು ಪ್ರವಾಸಕಥನಕಾರರೂ ಹೌದು. ಇವರ ಕವನ ಸಂಗ್ರಹಗಳು ಅನೇಕ ಮುದ್ರಣಗಳನ್ನು ಕಂಡು, ಅತಿ ಜನಪ್ರಿಯವಾಗಿರುವುದು. ಅವರ ಕಾವ್ಯದ ಸೊಬಗು, ಸಂವೇದನಾಶೀಲತೆ, ಆಯಾಕಾಲದ ಅನುಭವಕ್ಕೆ ಪ್ರಾಮಾಣಿಕ ಅಭಿವ್ಯಕ್ತಿಯನ್ನೀಯುವ ಕುಡಿಗಳೇ ಕಾರಣಗಳು. ಮಹನೀಯರ ಕವಿತೆಗಳು ವಾಸ್ತವದ ಕಠೋರತೆಯ ನಡುವೆ ಒಂದು ಆಸೆಯ ಹಂಬಲವನ್ನು ಜನತೆಗೆ ಒದಗಿಸುತ್ತವೆ, ಆದ್ದರಿಂದಲೇ ಇವರ ಕವಿತೆಗಳು ಕನ್ನಡ ಸಮುದಾಯಕ್ಕೆ ಅತ್ಯಂತ ಪ್ರಿಯವಾಗಿವೆ. ಇವರ ಕೃತಿಗಳಲ್ಲಿ ನವ್ಯ ಕವಿತೆಗಳಲ್ಲಿರುವಂತೆ ವಿಷಾದ, ವಿಡಂಬನೆ ಇದ್ದರೂ ನವೋದಯದ ಹಿರಿಯರಿಂದ ಪಡೆದ ಆದರ್ಶ ಹಾಗೂ ಕನಸುಗಾರಿಗೆ ಕೂಡ ಸಮ್ಮಿಲಿತವಾಗಿದೆ.

ಇವರು ಉತ್ತು, ಬಿತ್ತಿ, ಮಲಗಿರುವ ಬೀಜದ ಕಣ್ಣು ತೆರೆಸುವ ಕಾರ್ಯವನ್ನು ತಮ್ಮ ಕಾವ್ಯದಲ್ಲಿ ಮತ್ತು ಬದುಕಿನ ಉದ್ದಕ್ಕೂ ಮಾಡುತ್ತಾ ಬಂದಿದ್ದಾರೆ. ಜಿಎಸ್.ಎಸ್. ಜೀವನವನ್ನು ಮಾತ್ರವಲ್ಲದೆ ಪ್ರಕೃತಿ ಮತ್ತು ಸೃಜನಶೀಲತೆಯನ್ನೂ ಪ್ರೀತಿಸುತ್ತಾರೆ. ನಾಶವನ್ನು ಎದುರಿಸುವ ಏಕೈಕ ಉಪಾಯ ಸೃಷ್ಟಿಕ್ರಿಯೆ ಎಂದು ನಂಬಿರುತ್ತಾರೆ. ಅನಾಥವಾದ ಮಾನವತೆಯ ಒಂದು ಆರ್ತದನಿ, ದೀನ ಅಳು ಜಿ.ಎಸ್.ಎಸ್.ರ ಕಾವ್ಯದುದ್ದಕ್ಕೂ ಇರುವ ಅಖಂಡಿತ ಶೃತಿ.

ಜಿ.ಎಸ್.ಎಸ್. ಅವರು ನವೋದಯ ಸಂದರ್ಭದಲ್ಲೂ ಕುವೆಂಪು ಅವರಂತೆ ಒಬ್ಬ ಬಂಡಾಯ ಕವಿಯೇ. ಮನುಕುಲದಲ್ಲಿ ಕಾಣುವ ಮೌಲ್ಯನಾಶದ ದುರಂತ ಚಿತ್ರದೊಂದಿಗೆ ಅವರ ಕವಿತೆಗಳಲ್ಲಿ ಆಕ್ರೋಶವನ್ನೂ, ವಿಷಾದವನ್ನೂ ವಿಶೇಷವಾಗಿ ಕಾಣಬಹುದು. ದುಷ್ಟರ ವಿಜೃಂಭಣೆ, ಶಿಷ್ಟರ ನಿಷ್ಕ್ರಿಯತೆ ಮತ್ತು ತಳಮಳವನ್ನು 'ಭೀಮಾಲಾಪ' ಕವಿತೆಯು ಒಂದು ವಿನಯಶೀಲವಾದ ರೀತಿಯಲ್ಲಿ ಚಿತ್ರಿಸುತ್ತದೆ.

ಜಿ.ಎಸ್.ಎಸ್ ಅವರದ್ದು ಪ್ರಧಾನವಾಗಿ ಇಹನಿಷ್ಠ ಮನೊಧರ್ಮ. ಅವರು ಶ್ರೀ ಸಾಮಾನ್ಯತೆಯ ಆರಾಧಕರು, ಪ್ರಜಾಪ್ರಭುತ್ವಕ್ಕೆ ಹೇಳಿ ಮಾಡಿಸಿದ ಮನೋಧರ್ಮ. ಅವರ ಸಾಹಿತ್ಯ ಜೀವನ ಸಮಗ್ರ ಹಾಗೂ ಸಮೃದ್ಧವಾದುದು.

ಅವರ ಪ್ರಕಟಿತ ಕವನ ಸಂಗ್ರಹಗಳು. ಗದ್ಯಕೃತಿಗಳು ಸಂಪಾದನೆಗಳು, ಪ್ರವಾಸ ಕಥನಗಳು ಈ ಕೆಳಗಿನಂತಿವೆ.

- ಕವನ ಸಂಗ್ರಹಗಳು
- ಗದ್ಯ ಕೃತಿಗಳು
- ಸಂಪಾದಿತ
- ಪ್ರವಾಸ

ಪುಸ್ತಕ ಪ್ರಕಟಣೆ, ವಿಚಾರ ಸಂಕೀರ್ಣಗಳ ನಿಯೋಜನೆ, ವಿಮರ್ಶಾ ಜಾಗರಣೆಗಳ ಆಯೋಜನೆ, ಹೊಸಯುಗಕ್ಕೆ ಅಗತ್ಯವಾದ ಶಿಕ್ಷಣ ಪಠ್ಯಗಳ ನಿರ್ಮಾಣ, ಸಾಹಿತ್ಯಕ ಪರಂಪರೆಯ ಮರು ಅಧ್ಯಯನ, ಹೊಸ ಸಾಹಿತ್ಯಕ ಪ್ರತಿಭಾ ಪೀಳಿಗೆಯನ್ನು ಗುರುತಿಸಿ ಪ್ರತಿಭೆ ಅರಳಲು ತಕ್ಕ ವೇದಿಕೆಯ ನಿರ್ಮಾಣ, ಹೀಗೆ ಬಹುಮುಖೀ ನೆಲೆಯಲ್ಲಿ ತಮ್ಮ ಕ್ರಿಯಾಶೀಲತೆಯನ್ನು ತೊಡಗಿಸಿಕೊಂಡ ಶ್ರೀ ಜಿ.ಎಸ್.ಎಸ್. ರವರಿಗೆ ಅನೇಕ ಪ್ರಶಸ್ತಿ-ಗೌರವಗಳ ವೃಷ್ಟಿಯಾಗಿದೆ.

**ಶ್ರೀಯುತರಿಗೆ ಸಂದಿರುವ ಕೆಲವು ಪ್ರಶಸ್ತಿ-ಗೌರವಗಳು ಹೀಗಿವೆ:**

- ೧೯೭೪ರಲ್ಲಿ "ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ" ಎಂಬ ಪ್ರವಾಸ ಕಥನಕ್ಕೆ "ಸೋವಿಯೆಟ್ ಲ್ಯಾಂಡ್ ನೆಹರೂ" ಪ್ರಶಸ್ತಿ.
- ೧೯೮೨ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರ.
- ೧೯೮೩-೮೪ರಲ್ಲಿ ಯು.ಜಿ.ಸಿ. ಯಿಂದ ರಾಷ್ಟ್ರೀಯ ಉಪನ್ಯಾಸಕರಾಗಿ ನೇಮಕ.
- ೧೯೮೪ರಲ್ಲಿ "ಕಾವ್ಯಾರ್ಥ ಚಿಂತನ" ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
- ೧೯೮೪ರಲ್ಲಿ "ಕಾವ್ಯಾರ್ಥ ಚಿಂತನ" ಕೃತಿಗೆ ವರ್ಷದ ಅತ್ಯುತ್ತಮ ಕೃತಿ ಎಂದು ಬಹುಮಾನ.
- ೧೯೮೪ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ
- ಪ್ರೊ.ಭೂಸನೂರುಮಠ ಪ್ರಶಸ್ತಿ-೧೯೯೭
- ಗೊರೂರು ಪ್ರಶಸ್ತಿ-೧೯೯೯
- ಡಾ॥ ಮಾಸ್ತಿ ಪ್ರಶಸ್ತಿ-೨೦೦೦
- ರಾಷ್ಟ್ರಕವಿ ಪುರಸ್ಕಾರ-೨೦೦೬

**ಇತರ ಗೌರವಗಳು**

- ೧೯೬೩ರಲ್ಲಿ ದೆಹಲಿಯ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಕರ್ನಾಟಕದ ಪ್ರತಿನಿಧಿ.
- ೧೯೬೪ರಲ್ಲಿ ತುಮಕೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ.
- ೧೯೮೬ನೆ ಏಪ್ರಿಲ್ ನಲ್ಲಿ ಮದರಾಸು ಕನ್ನಡಿಗರ ಸಮ್ಮೇಳನದ ಅಧ್ಯಕ್ಷತೆ.
- ೧೯೯೨ನೇ ಜನವರಿಯಲ್ಲಿದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ೬೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ.
- ಗೌರವ ಡಿಲಿಟ್-(ನಾಡೋಜ) ಕನ್ನಡ ವಿಶ್ವವಿದ್ಯಾಲಯ-ಹಂಪಿ-೨೦೦೧.
- ಗೌರವ ಡಿಲಿಟ್-ಮೈಸೂರು ವಿಶ್ವವಿದ್ಯಾಲಯ-೨೦೦೪

- ಗೌರವ ಡಿಲಿಟ್–ಬೆಂಗಳೂರು ವಿಶ್ವವಿದ್ಯಾಲಯ–೨೦೦೬
- ಗೌರವ ಡಿಲಿಟ್–ಕುವೆಂಪು ವಿಶ್ವವಿದ್ಯಾಲಯ–೨೦೦೬

ನಮ್ಮ ಕನ್ನಡ ನಾಡಿನ ಹೆಸರಾಂತ ಸಾಹಿತ್ಯ ಸಾಧಕರಾದ ಡಾ॥ ಜಿ.ಎಸ್. ಶಿವರುದ್ರಪ್ಪನವರು ತಮ್ಮ ಸಾಹಿತ್ಯದ ಜೀವನದಲ್ಲಿ ಹೇಗೋ ಹಾಗೇ ನಾಡಿನ ಸಾಂಸ್ಕೃತಿಕ ಜೀವನದಲ್ಲೂ ತಮ್ಮ ವ್ಯಕ್ತಿತ್ವದ ಛಾಪು ಒತ್ತಿದವರು. ನಾಡಿನ ಒಟ್ಟಾರೆ ಸಾಮಾಜಿಕ–ಸಾಂಸ್ಕೃತಿಕ ಬಾಳುವೆಯಲ್ಲಿ ಶಿವರುದ್ರಪ್ಪನವರ ಬದುಕು ಸಮ್ಮಿಲಿತವಾಗಿದೆ.

ಈ ರಾಷ್ಟ್ರಕವಿ "ಕುವೈಟ್ ಕನ್ನಡ ಕೂಟ ಹಮ್ಮಿಕೊಂಡಿರುವ "ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ–೨೦೦೭", ಈ ಸಮಾರಂಭದ ಮುಖ್ಯ ಅಧ್ಯಕ್ಷರಾಗಿ ಭಾಗವಹಿಸಲು ಒಪ್ಪಿ ನಮ್ಮನ್ನು ಹರಸಿರುವುದು ನಮ್ಮೆಲ್ಲಾ ಅನಿವಾಸಿ ಕನ್ನಡಿಗರ ಬಹು ಜನ್ಮಗಳ ಪುಣ್ಯವೆಂದೇ ಹೇಳಬಹುದು. ನವೆಂಬರ್ ೩೦ ಹಾಗೂ ಡಿಸೆಂಬರ್ ೧ನೇ ದಿನಾಂಕಗಳಂದು ಜರುಗಲಿರುವ ಈ ವಿಶೇಷ ಕರ್ಯಕ್ರಮಕ್ಕೆ ನಾವು ಜಿ.ಎಸ್.ಎಸ್. ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ಬೇರೆ ರಾಷ್ಟ್ರಗಳಲ್ಲಿ ನೆಲೆಸಿರುವ ಇತರೇ ಅನಿವಾಸಿ ಕನ್ನಡಿಗರನ್ನು ನಾವು ಈ ಸಂದರ್ಭದಲ್ಲಿ ಆಹ್ವಾನಿಸುತ್ತಿದ್ದೇವೆ. "ಓ ಕನ್ನಡಿಗರೇ ಬನ್ನಿರಿ ಕನ್ನಡ ನಾಡು ಹಾಗೂ ನುಡಿಯ ಪತಾಕೆಯನ್ನು ಮುಗಿಲೆತ್ತರಕ್ಕೆ ಹಾರಿಸೋಣ"

ಜಲವಿಲ್ಲದ ನೆಲೆಗಳಲ್ಲಿ
ಕಮರುತಿರುವ ಕುದಿಗಳೆ
ಬಿರು ಬಿಸಿಲಿನ ತುಳಿತದಲ್ಲಿ
ಸೊರಗಿಹೋದ ಮಿಡಿಗಳೆ
ಉಸಿರನೀಡುವೆ ಹೆಸರ ಕೊಡುವೆ
ಬನ್ನಿ ನನ್ನ ಹೃದಯಕೆ.

## Dr.G.S.Shivarudrappa

Dr. G.S. Shivarudrappa (born February 7, 1926) is a Kannada poet, writer and researcher who was rewarded as Rashtrakavi by the Government of Karnataka on November 1, 2006.

*Early life*
G.S. Shivarudrappa was born in Shikaripura, in Shivamogga district of Karnataka. His father was a school teacher. He did his primary and secondary schooling in Shikaripura.

*Education*
Shivarudrappa pursued his B.A. in 1949 and M.A. in 1953 from University of Mysore, having secured gold-medals on three occasions. He was a student and follower of Kuvempu and was heavily inspired by Kuvempu's literary works and life.

In 1965, G.S. Shivarudrappa secured a doctorate for his thesis Soundarya Sameekshe written under the guidance of Kuvempu.

*Professional life*
Dr. G.S.S, as he is popularly known, started his career in 1949 as a lecturer in Kannada language at the Mysore University. On receiving the invitation from Hyderabad's Usmania University in 1963, he joined that university as a reader and the head of the Kannada department. He continued to serve in Usmania University till 1966.

In 1966, G.S.S joined the Bangalore University as a professor. He was later elected as a director of the university and he continued to contribute to Kannada Study at the university. It was during his administration as a director that the department of Kannada in the university was converted as Kannada Study Center.

Dr. G.S.S was honoured as a Rashtrakavi (Sanskrit: Poet of the Nation) by the Government of Karnataka during the Suvarna Karnataka (Golden Jubilee celebrations of Karnataka) occasion on November 1, the Kannada Rajyotsava day, 2006[1]. He was the third Kannada poet to be honoured with this prestigious title of Rashtrakavi, after his mentor and guide Kuvempu, and Govinda Pai.

*Literary works*

- Poem collections
- Saamagaana
- Cheluvu-Olavu
- Devashilpi
- Deepada Hejje
- Anaavarana
- Tereda Baagilu

- Gode
- Vyakthamadhya
- Teerthapaani
- Kaartika
- Kaadina Katthalalli
- Preeti illada mele
- Chakragati

*Prose/research works*

- Parisheelana
- Vimarsheya Poorva Pashchima
- Soundarya Sameekshe (Ph.D. thesis)
- Kaavyaartha Chintana
- Gatibimba
- Anuranana
- Pratikriye
- Kannada Sahithya Sameekshe
- Mahakavya Swaroopa
- Kannada Kavigala Kaavyakalpane
- Samagra Kannada Sahitya Charitre - A history of Kannada literature and language and its growth over the centuries[2]
- Kuvempu-a Reappraisal - A biographical work on Kuvempu, done for Government of Karnataka

*Travelogues*

- Moscowdalli 22 dina (22 Days in Moscow) - This work is a recipient of Soviet Land Nehru Award.
- Englandinalli Chaturmaasa (Four months in England)
- Americadalli Kannadiga (Kannadiga in America)
- Gangeya Shikharagalalli (In the mounts of the river Ganga)

*Awards and honours*

- Soviet Land Nehru Award - 1973
- Kendra Sahithya Academy Award - 1984 (for the work, Kaavyartha Chintana)
- Pampa Award
- Preseident of 61st All India Kannada Sahithya Sammelana, happened in Davanagere
- Karnataka Sahithya Academy Honorary Award - 1982
- Nadoja Award from Kannada University
- Honorary Doctarate from Bangalore University and Kuvempu University
- Honoured as a Rashtrakavi (Poet of the Nation) - 2006[1]